ಅಸಲು ದಾವಾ ಸಂಖ್ಯೆ . 284/2013

ಡಿ .ಡಬ್ಲ್ಯೂ- 2
ದಿಃ 23.02.2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದ ಃ-

ನನ್ನ ಹೆಸರು ಸಾಕಮ್ಮ. ತಂದೆ ಹೆಸರು ಮಲ್ಲಪ್ಪ ಸಿ . ನಾನು ಎಂ . ಬಿಎಡ್ ವಿದ್ಯಾಭ್ಯಾಸ ಮಾಡಿರುತ್ತೇನೆ. ಹಾಲಿ ಉಪತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅದರ ಪೂರ್ವದಲ್ಲಿ ನಾನು ಎಫ್ ಡಿ ಎ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಎಲ್ಲೂ ಕರ್ತವ್ಯ ಸಲ್ಲಿಸಿರುವುದಿಲ್ಲ. ಸದರಿ ಎಫ್ ಡಿ ಎ ಕೆಲಸವು ನನಗೆ ನನ್ನ ತಂದೆಯ ಮರಣಾನಂತರ ಅನುಕಂಪದ ಆಧಾರದ ಮೇಲೆ ಬಂದಿರುತ್ತದೆ. ನನ್ನ ತಂದೆಯವರು ಗ್ರಾಮಪಂಚಾಯತಿ ಕಾರ್ಯದರ್ಶಿಯಾಗಿದ್ದರು . ನನಗೆ ಮೊದಲು ಎಫ್ ಡಿ ಎ ಆಗಿ ಕೆಲಸ ಸಿಕ್ಕಿದ್ದು ಹೊನ್ನಾಳಿಯಲ್ಲಿ . ಕಂದಾಯ ಇಲಾಖೆಯಲ್ಲಿ ಸಿಕ್ಕಿರುತ್ತದೆ. ಕಂದಾಯ ಇಲಾಖೆ ಎಂದರೆ ತಹಶೀಲ್ದಾರ್ ಇಲಾಖೆಗೆ ಒಳಪಟ್ಟ ಕಚೇರಿ ಎಂದರೆ ಸರಿ .

ನಾನು ಇಎಸ್‌ಡಿ ( ವೇತನ ಸೆಕ್ಷನ್ ) , ಬರ ಪರಿಹಾರ ಸೆಕ್ಷನ್ , ಹಕ್ಕು ದಾಖಲೆ ( ಆರ್ ಆರ್ ಟಿ ಸೆಕ್ಷನ್ ) ಯಲ್ಲಿ ಕರ್ತವ್ಯ ನಿರ್ಹಿಸಿರುತ್ತೇನೆ. ನಾನು ದಿಃ 03.08.2010 ರಿಂದ 28.10.2019 ವರೆಗೂ 3 ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ನಾನು ಈ ಹಿಂದೆ ಸಲ್ಲಿಸಿದ ಪ್ರಮಾಣ ಪತ್ರವನ್ನು ನನ್ನ ತಾಯಿ ಬರೆಸಿ ಹಾಕಿರುತ್ತಾರೆ ಅವರ ಜೊತೆ ನಾನು ಸಹ ಇದ್ದೆ . ದಿಃ 28.05.1984 ನನ್ನ ಜನನ ದಿನಾಂಕವಾಗಿರುತ್ತದೆ. ನಿಮ್ಮ ತಾಯಿ ನಿಮ್ಮ ಪ್ರಮಾಣ ಪತ್ರ ಸಲ್ಲಿಸಿರುವುದರ ಬಗ್ಗೆ ಸಂಪೂರ್ಣ ಮಾಹಿತಿ ಇದೆಯಾ ಎಂಬ ಪ್ರಶ್ನೆಗೆ ಇದೆ ಎಂದರು . ನನ್ನ ತಾಯಿಗೆ 65 ವರ್ಷಕ್ಕೂ ಹೆಚ್ಚು ಪ್ರಾಯವಿರುತ್ತದೆ. ನನ್ನ ವಾಸ ಶಿಕಾರಿಪುರ . ನನ್ನ ತಾಯಿ ಹೊನ್ನಾಳಿಯ ದುರ್ಗಿಗುಡಿ ಯಲ್ಲಿ ವಾಸವಿದ್ದಾರೆ . ಅವರು ಒಬ್ಬರೇ ಇದ್ದಾರೆ. ಅವರ ದೈನಂದಿನ ಕೆಲಸಗಳನ್ನು ಅವರು ಸ್ವಂತ ಮಾಡುತ್ತಾರೆಂದರೆ ಸರಿ . ನನ್ನ ಮನೆಗೆ ನ್ಯಾಯಾಲಯದಿಂದ ನಡೆದುಕೊಂಡು ಹೋಗಬಹುದೆಂದರೆ ಸರಿ .

ನಾನು ಹಾಲಿ ಶಿಕಾರಿಪುರದಲ್ಲಿ ವಾಸವಿದ್ದೇನೆ. ಕಳೆದ 1 ವರ್ಷಗಳ ಹಿಂದೆ ನಾನು ಹೊನ್ನಾಳಿಯಲ್ಲಿ ವಾಸವಿದ್ದೇನೆ ಎಂದರು . ನನಗೆ 28.10.2019 ರ ನಂತರದಲ್ಲಿ ಶಿಕಾರಿಪುರಕ್ಕೆ

ವರ್ಗಾವಣೆ ಆಗಿರುತ್ತದೆ. ನಾನು ವರ್ಗಾವಣೆ ಆದಾಗಿನಿಂದ ಅಲ್ಲಿ ವಾಸವಿದ್ದೇನೆ. ವಾದಿಯು ನ್ಯಾಯಾಲಯಕ್ಕೆ  ಸಲ್ಲಿಸಿರುವ ದಾಖಲೆಗಳ ಬಗ್ಗೆ ಮತ್ತು ನಮ್ಮ ಪರವಾಗಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ.  ನನ್ನ ಅಜ್ಜನ ವಂಶಸ್ಥರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಕೈ ಬರಹದಲ್ಲಿ ಬರೆಯುವ ವಂಶವೃಕ್ಷ ದ ಪದ್ಧತಿಯು ನಾನು ಕೆಲಸ ಮಾಡುತ್ತಿದ್ದಾಗ ಇತ್ತು .

ಸಾಕ್ಷಿಗೆ ಒಂದು ವಂಶವೃಕ್ಷವನ್ನು ತೋರಿಸಲಾಯಿತು.  ಸದರಿ ವಂಶವೃಕ್ಷದಲ್ಲಿ ಸಾಕ್ಷಿಯು ಗ್ರಾಮ ಲೆಕ್ಕಾಧಿಕಾರಿಯ ಸಹಿ ಇದೆ ಎಂದು ನುಡಿಯುತ್ತಾರೆ.  ಆದರೆ ಅದರ ಗುರುತಿಸುವಿಕೆಯ ಬಗ್ಗೆ ಪ್ರತಿವಾದಿಯ ಪರ ವಕೀಲರು ತಕರಾರು ಹಾಕಿದ್ದು , ಅದನ್ನು ಗುರುತಿಸಿರುವುದಿಲ್ಲ.

ನನ್ನ ತಂದೆಯವರು  ಮರಣ ಹೊಂದಿರುತ್ತಾರೆ.  ಅವರ ಸಹೊದರರುಗಳು ಬಸಮ್ಮ, ಪರಮೇಶ್ವರಪ್ಪ , ಮಲ್ಲಪ್ಪ ,ಲೋಕೇಶ್ವರಪ್ಪ , ಶೇಖರಪ್ಪ , ಜಯಮ್ಮ, ವಿರುಪಾಕ್ಷಪ್ಪ ಆಗಿರುತ್ತಾರೆ. ಮೇಲೆ ಹೇಳಿದ ವ್ಯಕ್ತಿಗಳಲಿ ಬಸಮ್ಮ , ಮಲ್ಲಪ್ಪ ,  ಲೋಕೇಶ್ವರಪ್ಪ ರವರು ಮರಣ ಹೊಂದಿರುತ್ತಾರೆ. ನನ್ನ ಅಜ್ಜನ ಹೆಸರು ಶಿವಪ್ಪ . ಶಿವಪ್ಪ ರವರ ಸಹೋದರರು ಇಬ್ಬರು . ಹನುಮಂತಪ್ಪ ಮತ್ತು ಈರಪ್ಪ .  ಅವರಿಗೆ ಸಹೋದರಿಯರು ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.  ಸದರಿ ಶಿವಪ್ಪ ರವರಿಗೆ ಲಕ್ಕಮ್ಮ ಎಂದು ಸಹೋದರಿ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.  ಶಿವಪ್ಪ ,  ಹನುಮಂತಪ್ಪ ಮತ್ತು ಈರಪ್ಪ  ರವರ ತಂದೆ ರುದ್ರಪ್ಪ .

ರುದ್ರಪ್ಪನ ಹೆಂಡತಿ ಹೆಸರು ನನಗೆ ಗೊತ್ತಿರುವುದಿಲ್ಲ.  ರುದ್ರಪ್ಪರವರಿಗೆ ಮಲ್ಲಮ್ಮ ಎಂಬ ಹೆಂಡತಿ ಇದ್ದರು ಎಂದರೆ ಇರಬಹುದು .  ಹನುಮಂತಪ್ಪ ನವರ ಹೆಂಡತಿಯ ಹೆಸರು ನನಗೆ ಗೊತ್ತಿರುವುದಿಲ್ಲ.  ಅವರ ಮಕ್ಕಳು ಈಶ್ವರಪ್ಪ , ಬಸವಗೌಡಪ್ಪ ,ಮಂಜಪ್ಪ , ಕಮಲಮ್ಮ , ಸುಶೀಲಮ್ಮ .  ಸದರಿಯವರ ತಾಯಿ ಯವರ ಹೆಸರು ಬಸಮ್ಮ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯವರಿಗೆ ನಾವು 3 ಜನ ಮಕ್ಕಳು . ಲೋಲಾಕ್ಷಿ , ಸಾಕಮ್ಮ , ಯಶೋಧ . ಸಾಕ್ಷಿಗೆ ಒಂದು ವಂಶವೃಕ್ಷವನ್ನು ತೋರಿಸಿ , ಸದರಿ ವಂಶವೃಕ್ಷ ವನ್ನು ತಯಾರಿಸುವಂತೆ 2 ನೇ ಪ್ರತಿ ವಾದಿಯು ತಹಶೀಲ್ದಾರ್  ಕಚೇರಿಗೆ ಅರ್ಜಿ ಸಲ್ಲಿಸಿ , ಪಡೆದಿರುವ ವಂಶವೃಕ್ಷ ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ ಎಂದರು . ಸದರಿ  ವಂಶವೃಕ್ಷ ದಲ್ಲಿ ನಿಮ್ಮ ಚಿಕ್ಕಪ್ಪರವರ ಸಹಿ ಇದೆ ಎಂದರೆ ನನಗೆ ಗೊತ್ತಿಲ್ಲ ಎಂದರು .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ

ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಹೊನ್ನಾಳಿ.